ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 14-10-2022

ಮಾರ್ಕೆಟ ಪೊಲೀಸ ಠಾಣೆ  ಅಪರಾಧ ಸಂಖ್ಯೆ 79/2022 ಕಲಂ .379 ಐಪಿಸಿ :-

ದಿನಾಂಕ 13-10-2022 ರಂದು 1130 ಗಂಟೆಗೆ ಫಿರ್ಯಾದಿ ಶ್ರೀ ಮಹೇಶ ತಂದೆ ರಾಮಸಿಂಗ ಠಾಕೂರ ವಯ 23 ವರ್ಷ ಜಾತಿ ರಜಪುತ ಉ;ಕಾರ ಮೇಕಾನಿಕ ಸಾ:ಡೋಣಗಾಪೂರ ಗ್ರಾಮ ತಾ;ಭಾಲ್ಕಿ ಜಿ;ಬೀದರ ಸದ್ಯ ನಾವದಗೇರಿ ಬೀದರ ಇವರು ಠಾಣೆಗೆ ಹಾಜರಾಗಿ ನೀಡಿರು ದೂರಿನ ಸಾರಾಂಶವೆನೆAದರೆ ಇವರ ಹತ್ತಿರ ಒಂದು ಹಿರೊ ಸ್ಪಲೆಂಡರ ಪ್ಲಸ್ ದ್ವಿಚಕ್ರವಾಹನ.ನಂ.ಟಿ.ಎಸ್-10-ಇವಿ-7387 ನೇದ್ದು ಇದ್ದು ಇದರ ಚೆಸ್ಸಿ.ನಂ. MBLHAW080KHL00375 ಇದ್ದು ಇದರ ಇಂಜಿನ್.ನ. HA10AGKHL01135 ನೇದ್ದು ಇರುತ್ತದೆ. ಇದರ ಅ.ಕಿ.45000=00 ರೂ ಇರುತ್ತದೆ. ಹೀಗಿರುವಾಗ ದಿನಾಂಕ 19-09-2022 ರಂದು ರಾತ್ರಿ 2100 ಗಂಟೆಯ ಸುಮಾರಿಗೆ ದ್ವಿಚಕ್ರವಾಹನವನ್ನು ಬೀದರ ನಗರದ ನಾವದಗೇರಿಯಲ್ಲಿರುವ  ಮನೆಯ ಮುಂದೆ ನಿಲ್ಲಿಸಿ ಮನೆಯ ಒಳಗೆ ಹೋಗಿರುತ್ತಾರೆ ನಂತರ ದಿನಾಂಕ 20-09-2022 ರಂದು ಮುಂಜಾನೆ 0600 ಗಂಟೆಯ ಸುಮಾರಿಗೆ ಮನೆಯಿಂದ ಹೊರಗೆ ಬಂದು ನೋಡಲಾಗಿ ನಿಲ್ಲಿಸಿದ  ದ್ವಿಚಕ್ರ ವಾಹನವನ್ನು ಇರಲಿಲ್ಲಾ.  ಎಲ್ಲಾ ಕಡೆಗೆ ಹುಡುಕಾಡಿರುತ್ತೇವೆ ಅದರೆ, ಸಿಕ್ಕಿರುವುದಿಲ್ಲಾ ಯಾರೋ ಅಪರಿಚಿತ ಕಳ್ಳರೂ ದಿನಾಂಕ 19-09-2022 ರಂದು ರಾತ್ರಿ 2100 ಗಂಟೆಯಿAದ ದಿನಾಂಕ 20-09-2022 ರಂದು 0600 ಗಂಟೆಯ ಅವಧಿಯಲ್ಲಿ ಕಳವು ಮಾಡಿಕೊಂಡು ಹೋಗಿರುತ್ತಾರೆ. ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

ಬೀದರ ನೂತನ ನಗರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 173/2022 ಕಲಂ 504, 307 ಐಪಿಸಿ :-

ದಿನಾಂಕ 13/10/2022 ರಂದು ಫಿರ್ಯಾದಿ ಏಕನಾಥರಾವ ತಂದೆ ಬಸಪ್ಪಾ ಚೊಂಡೆ, 66 ವರ್ಷ, ಜಾತಿ-ಲಿಂಗಾಯತ, ಉದ್ಯೋಗ-ಒಕ್ಕಲುತನ, ಮು-ರಾಮಚಂದ್ರನಗರ ರವರು ನೀಡಿದ ದೂರಿನ ಸಾರಾಂಶವೆನೆAದರೆ ಇವರ  ಹೆಸರಿನಲ್ಲಿರುವ ಜಮೀನಿನ ಮುಖಾಂತರ ಸಧ್ಯ ಔಟರ್ ರಿಂಗ್ ರೋಡ ಹಾದು ಹೋಗಿದ್ದು ಸಧ್ಯ ರೋಡಿನ ಕಾಮಗಾರಿ ಕೆಲಸ ನಡೆಯುತ್ತಿದೆ.  ಜಮೀನಿನ ಪಕ್ಕದಲ್ಲಿ ಶಂಕರ ತಂದೆ ಸಂಗಪ್ಪಾ ಚೊಂಡೆ ಸಾ-ನೌಬಾದ ರವರ ಜಮೀನು ಇದ್ದು ಅವರ ಜಮೀನಿನ ಸ್ವಲ್ಪ ಭಾಗದಿಂದ ಸಹ ಔಟರ್ ರಿಂಗ್ ರೋಡ ಹಾದು ಹೋಗಿದ್ದು ಅದೇ ವಿಷಯದಲ್ಲಿ ಅವನು ಸ್ವಲ್ಪ ಮನಸ್ಸಿಗೆ ಬೇಜಾರು ಮಾಡಿಕೊಂಡು ಆಗಾಗ ಫಿರ್ಯಾದಿಯ ಜೊತೆ ಜಗಳಕ್ಕೆ ಬರುತ್ತಿದ್ದನು.  ರಸ್ತೆ ನಿರ್ಮಾಣ ಮಾಡಲು ಸರ್ಕಾರವು ಜಮೀನನ್ನು ಸ್ವಾಧಿನಪಡಿಸಿಕೊಂಡಿದ್ದು, ಆದರೇ ಇನ್ನುವರೆಗೆ ಸದರಿ ಜಮೀನನ್ನು ಸ್ವಾಧಿನಪಡಿಸಿಕೊಂಡ ಬಗ್ಗೆ ನಮಗೆ ಪರಿಹಾರ ನೀಡಿರುವುದಿಲ್ಲ. ಶಂಕರ ಈತನು ಒಂದೆರಡು ಸಾರಿ ಫಿರ್ಯಾದಿ ಬಳಿ ಬಂದು ನನ್ನ ಜಮೀನು ಸ್ವಲ್ಪ ಹೋಗಿದೆ ಅದಕ್ಕಾಗಿ ನಿಮ್ಮ ಮತ್ತು ನನ್ನ ಜಮೀನಿನ ಪರಿಹಾರದ ಹಣವನ್ನು ನಾನೇ ನನ್ನ ಖಾತೆಯಲ್ಲಿ ಹಾಕಿಸಿಕೊಳ್ಳುತ್ತೇನೆಂದು ಹೇಳಿದ್ದು ಅದಕ್ಕೆ ಸುಮಾರು ಜನರಿಂದ  ಫೋನ ಕೂಡ ಮಾಡಿಸಿದ್ದು ಅಲ್ಲದೇ ಹೈವೆ ಅಥಾರಿಟಿ ಅಧಿಕಾರಿಯವರಿಗೂ ಸಹ ಭೇಟ್ಟಿಯಾಗಿ ಎಲ್ಲಾ ಹಣವನ್ನು ಅವನ ಖಾತೆಯಲ್ಲಿಯೇ ಹಾಕಲು ಅವರಿಗೆ ಹೇಳಿರುತ್ತಾನೆಂದು  ನಂತರ ಗೊತ್ತಾಗಿರುತ್ತದೆ. ಆಗ ಫಿರ್ಯಾದಿಯು ಶಂಕರ ಚೊಂಡೆ ಈತನಿಗೆ ನೀನು ನಿನ್ನ ಜಮೀನು ಎಷ್ಟು ಹೋಗಿದೆಯೋ ಅಷ್ಟನ್ನು ಮಾತ್ರ ಹದ್ದುಬಸ್ತ ಮಾಡಿಕೊಂಡು ಮ್ಯಾಪ ಮಾಡಿಸಿಕೋ, ಎಷ್ಟು ಜಮೀನು ಹೈವೆಯಲ್ಲಿ ಹೋಗಿದೆಯೋ ಅಷ್ಟು ಹಣವನ್ನು ಮಾತ್ರ ಸರ್ಕಾರದಿಂದ ಪಡೆದುಕೊಳ್ಳು ನನ್ನ ಜಮೀನಿನ ಹದ್ದಬಸ್ತ ಮತ್ತು ಮ್ಯಾಪ ಮಾಡಿಸಿಕೊಂಡು ನಾನು ನನ್ನ ಪಾಲಿನ ಹಣ ಪಡೆದುಕೊಳ್ಳುತ್ತೇನೆಂದು ಹೇಳಿದ್ದು ಆದರೂ ಸಹ ಶಂಕರ ಈತನು ಫಿರ್ಯಾದಿ ಮಾತನ್ನು ಕೇಳದೇ  ಆಗಾಗ ಜಗಳ ಮಾಡುತ್ತಿದ್ದನು. ಹೀಗಿರಲು ದಿನಾಂಕ 13/10/2022 ರಂದು 1730 ಗಂಟೆಯ ಸುಮಾರಿಗೆ ಫಿರ್ಯಾದಿಯು ತನ್ನ ಜಮೀನಿನ ಪಕ್ಕದಲ್ಲಿರುವ ಒಂದು ನಿರ್ಮಾಣ ಹಂತದಲ್ಲಿನ ಫ್ಲೆöÊಓವರ್ ಬ್ರಿಡ್ಜ ಬಳಿ ನಿಂತಿದ್ದು, ಬ್ರಿಡ್ಜ ಸುಮಾರು 50 ಫೀಟ ಎತ್ತರವಿದ್ದು ಆ ಸಮಯಕ್ಕೆ ಅಲ್ಲಿಗೆ ಬಂದ ಶಂಕರ ಇತನು  ಜಗಳ ತೆಗೆದು ಅವಾಚ್ಯವಾಗಿ ಬೈದು ನಿನಗೆ ಒಂದು ಸಾರಿ ಹೇಳಿದರೆ ಗೊತ್ತಾಗೋದಿಲ್ಲವೇನು, ನಾನು ಪರಿಹಾರದ ಹಣ ನನ್ನ ಖಾತೆಗೆ ಜಮಾ ಮಾಡಿಕೊಂಡು ನಂತರ ನಿನಗೆ ಕೊಡುತ್ತೇನೆಂದು ಹೇಳಿದರೂ ಏಕೆ ಕೇಳುತ್ತಿಲ್ಲಾ ಎಂದಾಗ ಫಿರ್ಯಾದಿಯು ನನ್ನ ಪಾಲಿನ ಹಣ ನಾನು ತೆಗೆದುಕೊಳ್ಳುತ್ತೇನೆ ನಿನ್ನ ಪಾಲಿನ ಹಣ ನೀನು ತೆಗೆದುಕೋ ಎಂದಾಗ ಅವನು ಸಿಟ್ಟಿನಿಂದ ಹೀಗಾದರೇ ಇಂದು ನಿನಗೆ ಮುಗಿಸಿಬಿಡುತ್ತೇನೆಂದು ಫಿರ್ಯಾದಿಯನ್ನು  ಬ್ರೀಡ್ಜ ಮೇಲಿಂದ ಕೆಳಗೆ ನೂಕಿ ಕೊಲೆ ಮಾಡುವ

ಉದ್ದೇಶದಿಂದ ಜೋರಾಗಿ ಹಿಂದಕ್ಕೆ ನೂಕಿಕೊಟ್ಟಿದ್ದು ಆಗ ನಾನು ಧರಿಸಿದ ಪ್ಯಾಂಟ್ ಬ್ರಿಡ್ಜಿನ ರಾಡಗೆ ಸಿಕ್ಕಿಹಾಕಿಕೊಂಡು ಪ್ಯಾಂಟ್ ಪಾದದಿಂದ ಚೈನವರೆಗೆ ಹರಿದು ನನ್ನ ತೊಡೆಗೆ ಗಾಯವಾಗಿದ್ದು ಅಲ್ಲದೇ ಒಂದು ರಾಡ್ ಬೆನ್ನಿನಲ್ಲಿ ಚುಚ್ಚಿ ಬೆನ್ನಿಗೆ ಗಾಯವಾಗಿದ್ದು, ಚಿಕಿತ್ಸೆ ಕುರಿತು ತಳವಾಡೆ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತಾರೆ. ಕಾರಣ ಅವಾಚ್ಯ ಬೈದು , ಹಲ್ಲೆ ಮಾಡಿ ಕೊಲೆ ಮಾಡಲು ಪ್ರಯತ್ನ ಮಾಡಿದ ಶಂಕರ ಚೊಂಡೆ ಮು-ನೌಬಾದ ರವರ ವಿರುಧ್ದ ಸೂಕ್ತ ಕಾನೂನು ಕ್ರಮ ಕೈಕೊಳ್ಳಲು ಕೋರಿದೆ ಎಂದು ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

ಖಟಕಚಿಂಚೊಳ್ಳಿ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 87/2022 ಕಲಂ 379 ಐಪಿಸಿ :-

ದಿನಾಂಕ: 13/10/2022 ರಂದು 12:00 ಗಂಟೆಗೆ ಪಿರ್ಯಾದಿ ಶ್ರೀ ಕಲ್ಲಪ್ಪ ತಂದೆ ಹಣಮಂತರಾವ ರೂದ್ರಪ್ಪನೋರ ಸಾ: ಚಳಕಾಪೂರ ರವರು ಠಾಣೆಗೆ ಹಾಜರಾಗಿ ಲಿಖಿತ ದೂರು ನೀಡಿದರ ಸಾರಾಂಶವೆನೆAದರೆ, ಇವರು ಒಂದು ಬಜಾಜ ಫಲ್ಸರ್ ಮೋಟಾರ ಸೈಕಲ ನಂ: ಏ೦38/ಇ-5693 ನ್ನು 1,40,000/- ರೂಪಾಯಿಗೆ ಖರಿದಿ ಮಾಡಿದ್ದು ಅದನ್ನು ತನ್ನ ಮಗ ಕೀರಣ ರೂದ್ರಪ್ಪನೋರ ಇತನ ಹೆಸರಿನಲ್ಲಿ ನೊಂದಣಿಯಾಗಿರುತ್ತದೆ. ದಿನಾಂಕ: 09/10/2022 ರಂದು ಎಂದಿನAತೆ ಫರ಼ಯಾದಿಯು ತಮ್ಮ ಬಜಾಜ ಫಲ್ಸರ್ ಮೋಟಾರ ಸೈಕಲ ನಂ: ಏ೦38/ಇ-5693 ರ ಮೇಲೆ ರಾಶಿ ಮಶಿನ ಕೆಲಸ ಕುರಿತು ಖಟಕ ಚಿಂಚೋಳಿ ಗ್ರಾಮಕ್ಕೆ ಹೊಗಿದ್ದು ಇರುತ್ತದೆ. ಮತ್ತು ಅದೆ ದಿನ ಖಟಕ ಚಿಂಚೋಳಿ ಗ್ರಾಮದಲ್ಲಿ ಭವಾನಿ ದೇವಿಯ ಮೇರವಣಿಗೆ ಇರುವುದರಿಂದ ರಾತ್ರಿ 10 ಪಿ.ಎಮ್ ಗಂಟೆಯ ಸುಮಾರಿಗೆ ಮೋಟಾರ ಸೈಕಲ ನಂ: ಏ೦38/ಇ-5693 ನ್ನು ಖಟಕ ಚಿಂಚೋಳಿ ಗ್ರಾಮದಲ್ಲಿನ ಎಮ್.ಎಸ್.ಐ.ಎಲ್ ವೈನ್ ಶ್ಯಾಪ್ ಮುಂದುಗಡೆ ಇರುವ ವಿಜಯಕುಮಾರ ಕಡಗಂಚೆ ರವರ ಖುಲ್ಲಾ ಜಾಗೆಯಲ್ಲಿನ ಮರದ ಕೆಳಗೆ ನಿಲ್ಲಿಸಿ ಫರ಼ಯಾದಿ ಹಾಗೂ ಖಟಕ ಚಿಂಚೋಳಿ ಗ್ರಾಮದ ಸುನೀಲ ತಂದೆ ಕಾಶಪ್ಪ ಹೊನ್ನಾಳೆ ಮತ್ತು ಸಂಗಮೇಶ ತಂದೆ ರಮೇಶ ಕೊರೆ ರವರುಗಳು ಕೂಡಿ ಖಟಕ ಚಿಂಚೋಳಿ ಗ್ರಾಮದಲ್ಲಿ ಭವಾನಿ ದೇವಿಯ ಮೇರವಣಿಗೆ ನೋಡಿಕೊಂಡು ಬರಲು ಹೊಗಿದ್ದು, ನಂತರ ಭವಾನಿ ದೇವಿಯ ಮೇರವಣಿಗೆ ಮುಗಿಸಿಕೊಂಡು ಮರಳಿ ಬಂದು ನೋಡಿದಾಗ ನಮ್ಮ ಬಜಾಜ ಫಲ್ಸರ್ ಮೋಟಾರ ಸೈಕಲ ನಂ: ಏ೦38/ಇ-5693 ಇರುವುದಿಲ್ಲ ದಿನಾಂಕ: 09/10/2022 ರಂದು ರಾತ್ರಿ 10 ಪಿ.ಎಮ್ ಗಂಟೆಯಿAದ 11:30 ಪಿ.ಎಮ್ ಗಂಟೆಯ ಮಧ್ಯದ ಅವಧಿಯಲ್ಲಿ ಯಾರೋ ಅಪರಿಚಿತ ಕಳ್ಳರು ಕಳವು ಮಾಡಿಕೊಂಡು ಹೋಗಿರುತ್ತಾರೆ ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.